ವಚನಕಾರ್ತಿಯರ ವಚನಗಳಲ್ಲಿ ಭಕ್ತಿ ರೂಪಕದ ಪರಿಕಲ್ಪನೆ

ಮಹಾಲಿಂಗ ಪ್ರಭು*

DOI: https://doi.org/10.5281/zenodo.23890538

ABSTRACT

ವಚನಕಾರ್ತಿಯರ ಸಾಹಿತ್ಯದಲ್ಲಿ 'ಭಕ್ತಿ'ಯ ಕಲ್ಪನೆಯು ಸಾಂಪ್ರದಾಯಿಕ ಮತ್ತು ಆಚರಣಾತ್ಮಕ ನೆಲೆಗಳನ್ನು ಮೀರಿ ವಿಶಿಷ್ಟ ರೂಪಕವಾಗಿ ಬೆಳೆದಿದೆ. ಉಪನಿಷತ್ತು ಹಾಗೂ ಪುರಾಣಗಳ ಕಾಲದ ಕರ್ಮಠ ಭಕ್ತಿಯ ವ್ಯಾಖ್ಯಾನಗಳನ್ನು ಬದಿಗೊತ್ತಿ, ಶರಣೆಯರು ಕಾಯಕ, ದೇಹ ಮತ್ತು ಅನುಭಾವಗಳ ಮೂಲಕ ಭಕ್ತಿಗೆ ಹೊಸ ಭಾಷ್ಯ ಬರೆದರು. ಅಕ್ಕಮಹಾದೇವಿ, ಮೋಳಿಗೆ ಮಹಾದೇವಿ, ಅಮ್ಮುಗೆ ರಾಯಮ್ಮ ಮುಂತಾದವರು ಗುಡಿ–ಗೋಪುರಗಳ ಸ್ಥಾವರ ಭಕ್ತಿಯನ್ನು ತಿರಸ್ಕರಿಸಿ, 'ದೇಹವೇ ದೇಗುಲ' ಎಂಬ ತತ್ವವನ್ನು ಪ್ರತಿಪಾದಿಸಿದ್ದಾರೆ. ಪ್ರಾಪಂಚಿಕ ಡಂಬಾಚಾರಗಳು ಹಾಗೂ ವ್ರತ–ನೇಮಗಳನ್ನು ಅಲ್ಲಗಳೆದು, ದೈನಂದಿನ ಬದುಕು, ವೃತ್ತಿ ನಿಷ್ಠೆ ಮತ್ತು ಕಾಯಕಗಳಲ್ಲೇ ದೇವರನ್ನು ಕಾಣುವ ಅವರ ನಿಲುವುಗಳು ಅನನ್ಯವಾಗಿವೆ. ಭಕ್ತಿಯನ್ನು ಕೇವಲ ಪೂಜಾವಿಧಾನವಾಗಿ ನೋಡದೆ, ಅದನ್ನು ಬದುಕಿನ ಅವಿಭಾಜ್ಯ ಅಂಗವಾಗಿ ಹಾಗೂ ಲಿಂಗಭೇದವಿಲ್ಲದ ಸಮಾನತೆಯ ಸಾಧನವಾಗಿ ಕಟ್ಟಿಕೊಟ್ಟ ಸ್ತ್ರೀ ಸಂವೇದನೆಯ ತಾತ್ವಿಕ ನೆಲೆಗಳನ್ನು ಇಲ್ಲಿ ವಿಸ್ತೃತವಾಗಿ ವಿಶ್ಲೇಷಿಸಲಾಗಿದೆ.

KEYWORDS: ವಚನಕಾರ್ತಿಯರು, ಭಕ್ತಿ ರೂಪಕ, ಕಾಯಕ, ದೇಹವೇ ದೇಗುಲ, ಶರಣ ಸಾಹಿತ್ಯ.

* **ಮಹಾಲಿಂಗ ಪ್ರಭು,** ಸಹಾಯಕ ಪ್ರಾಧ್ಯಾಪಕರು, ದಯಾನಂದ ಸಾಗರ್ ಬಿಜಿನೆಸ್ ಅಕಾಡೆಮಿ, ಬೆಂಗಳೂರು.

ಪೀಠಿಕೆ:

ಭಕ್ತಿ ಪದದ ಉತ್ಪತ್ತಿ ಹಾಗೂ ವ್ಯಾಖ್ಯಾನ: ಭಜ್ ಧಾತುವಿಗೆ 'ಕ್ತಿನ್' ಪ್ರತ್ಯಯ ಸೇರಿ 'ಭಕ್ತಿ' ಪದವಾಗಿದೆ. ಭಕ್ತಿ ಪದಕ್ಕೆ ಅನೇಕ ಅರ್ಥಗಳಿವೆ. ಸೇವಿಸುವುದು (ಭಜ್ ಸೇವಾಯಾಂ), ಶ್ರದ್ಧೆ, ಧರ್ಮನಿಷ್ಠೆ, ಉಪಾಸನೆ, ಅರ್ಪಣೆ, ನಿವೇದನೆ ಇತ್ಯಾದಿ. 'ಭಕ್ತಿ'[1] ಪದವು ಮೊಟ್ಟಮೊದಲಿಗೆ ಶ್ವೇತಾಶ್ವತರ ಉಪನಿಷತ್ತಿನಲ್ಲಿ ಕಂಡುಬರುತ್ತದೆ. ''ಯಸ್ಯ ದೇವೇ ಪರಾ ಭಕ್ತಿಃ ಯಥಾ ದೇವೇ ತಥಾ ಗುರೌ । ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ॥'' (ಯಾರಿಗೆ ದೇವರಲ್ಲಿ ಅಪಾರ ಭಕ್ತಿ ಇರುತ್ತದೆಯೋ ಮತ್ತು ದೇವರಲ್ಲಿರುವಷ್ಟೇ ಭಕ್ತಿ ಗುರುವಿನಲ್ಲಿಯೂ ಇರುತ್ತದೋ ಅಂತಹ ಮಹಾತ್ಮರಿಗೆ ಇಲ್ಲಿಯವರೆಗೆ ಹೇಳಿದ ಸಂಗತಿಗಳ ಅರ್ಥವು ಹೊಳೆಯುತ್ತದೆ). ಆನಂತರ ಈ ಪದದ ಹಾಗೂ ಭಕ್ತಿಯೋಗದ ವ್ಯಾಖ್ಯಾನವನ್ನು[2] ನಾವು ದೀರ್ಘವಾಗಿ ಭಗವದ್ಗೀತೆಯಲ್ಲಿ ಕಾಣುತ್ತೇವೆ. ಇತಿಹಾಸತಜ್ಞರ ಅಭಿಪ್ರಾಯದಲ್ಲಿ ಭಕ್ತಿ ಎಂಬ ಪರಿಕಲ್ಪನೆ ವೇದೋತ್ತರ ಕಾಲದ್ದು ಮತ್ತು ಅದು ಪುರಾಣ, ಮಹಾಕಾವ್ಯಗಳ ಯುಗದಲ್ಲಿ ಬೆಳೆಯಿತು. ಈ ಪರಿಕಲ್ಪನೆಯ ಆಧಾರ ಗ್ರಂಥಗಳೆಂದರೆ ಭಗವದ್ಗೀತೆ, ಭಾಗವತ ಪುರಾಣ (9ನೇ ಶತಮಾನ) ಮತ್ತು ನಾರದ ಭಕ್ತಿಸೂತ್ರ (12ನೇ ಶತಮಾನದಲ್ಲಿ ರಚಿಸಲ್ಪಟ್ಟ 84 ಸೂತ್ರಗಳ ಗ್ರಂಥ).

ಭಕ್ತ ಹಾಗೂ ಭಕ್ತಿಯ ವಿಧಗಳು:

ಭಕ್ತ–ಭಕ್ತಿಯಲ್ಲಿ ಎರಡು ಬಗೆ: ಅಪರಾ ಮತ್ತು ಪರಾ. ಅಪರಾ (ಗೌಣ) ಭಕ್ತಿಯೆಂದರೆ ಯಾವುದಾದರೂ ಪ್ರಾಪಂಚಿಕ ವಾಂಛೆಯ ಕಾರಣದಿಂದ ಉದ್ಭವಿಸುವ ಭಕ್ತಿ. ಪರಾ (ರಾಗಾತ್ಮಕ) ಭಕ್ತಿಯೆಂದರೆ ಭಕ್ತನು ಎಲ್ಲಾ ಬಗೆಯ ಪ್ರಾಪಂಚಿಕ ವಾಂಛೆಗಳನ್ನೂ ಕಾಮನೆಗಳನ್ನೂ ತ್ಯಜಿಸಿ ತನ್ನ ಇಷ್ಟದೈವದೊಡನೆ ಒಂದಾಗುವುದಕ್ಕೆ ಹಂಬಲಿಸುವುದು. ಭಕ್ತಿ ಮಾರ್ಗಗಳು ಎಂಟು: ಸ್ಮರಣ, ಕೀರ್ತನ, ವಂದನ, ಪಾದಸೇವನ, ಅರ್ಚನ, ದಾಸ್ಯ (ತನ್ನನ್ನು ತಾನು ಇಷ್ಟದೈವದ ಸೇವಕನೆಂದು ಭಾವಿಸುವುದು) ಮತ್ತು ಆತ್ಮ ನಿವೇದನೆ (ತನ್ನ ಭಾವನೆಗಳನ್ನು ಮುಕ್ತವಾಗಿ ಇಷ್ಟದೈವದೊಡನೆ ಹೇಳಿಕೊಳ್ಳುವುದು).

ಭಕ್ತಿಯ ಕಲ್ಪನೆಯ ಹಿನ್ನೆಲೆಯಲ್ಲಿ ರೂಪಕ ವಿನ್ಯಾಸ (ವಚನಕಾರ್ತಿಯರಲ್ಲಿ ಭಕ್ತಿ ಹಾಗೂ ಭಕ್ತ ಪರಿಕಲ್ಪನೆ):

ವಚನಗಳು ವ್ಯವಸ್ಥೆಯಲ್ಲಿನ ಭಕ್ತಿ, ಭಕ್ತ ಎಂಬ ಕಲ್ಪನೆ ತಿರಸ್ಕರಿಸಿರುವುದನ್ನು ಕಾಣುತ್ತೇವೆ. ಭಕ್ತಿ, ಭಕ್ತ ಎಂಬುದನ್ನು ರೂಪಕವಾಗಿ ಅಕ್ಕಮಹಾದೇವಿ 37 ವಚನಗಳಲ್ಲಿ, ಮೋಳಿಗೆ ಮಹಾದೇವಿ 11 ವಚನಗಳಲ್ಲಿ, ಅಮ್ಮುಗೆ ರಾಯಮ್ಮ 7 ವಚನಗಳಲ್ಲಿ, ಅಕ್ಕಮ್ಮ 12 ವಚನಗಳಲ್ಲಿ, ಆಯ್ದಕ್ಕಿ ಲಕ್ಕಮ್ಮ 4 ವಚನಗಳಲ್ಲಿ, ನಾಗಲಾಂಬಿಕೆ 4 ವಚನಗಳಲ್ಲಿ, ಗಂಗಾಂಬಿಕೆ 4 ವಚನಗಳಲ್ಲಿ, ಕದಿರೆಮ್ಮ, ಮುಕ್ತಾಯಕ್ಕ ಕ್ರಮವಾಗಿ ಒಂದೊಂದು ವಚನಗಳಲ್ಲಿ ಭಕ್ತಿಯ ರೂಪಕಗಳನ್ನು ಸಮರ್ಥವಾಗಿ ಬಳಸಿದ್ದಾರೆ.[3] ವಚನಗಳು ಪ್ರಾಪಂಚಿಕ ಹಿನ್ನೆಲೆಯಲ್ಲಿಯೇ ಅಭಿವ್ಯಕ್ತಗೊಂಡಿರುವುದು

ಕಂಡುಬಂದರೂ ಅದರೊಳಗಿನ ಅರ್ಥಗಳು ಭಿನ್ನವೇ ಆಗಿವೆ. ಪ್ರಾಪಂಚಿಕ ಆಚರಣೆ, ನೇಮ, ವ್ರತ ಹಿನ್ನೆಲೆಯಲ್ಲಿನ ಭಕ್ತಿ, ಭಕ್ತ ಸ್ವರೂಪವನ್ನು ಅಲ್ಲಗಳೆದು, ನೆಲೆಯೊಂದಿಗೆ ತತ್ವಜ್ಞಾನಿಯಾಗುತ್ತಾರೆ. ನಿರ್ಲಿಪ್ತರಾಗುತ್ತಾ ಕಾರ್ಯಗಳನ್ನು ಶಿವಾರ್ಪಿತ ಎಂದೆನ್ನುತ್ತಾ ಕೆಲವೆಡೆ ಸೃಷ್ಟಿಯ ಮೂಲ, ಬದುಕಿನ ಆರಂಭವನ್ನು ವಿಶ್ಲೇಷಿಸಿದ್ದಾರೆ. ಪ್ರಾಪಂಚಿಕ ನೆಲೆಯ ಭಕ್ತಿಯಲ್ಲಿನ ಸೊಗಲಾಡಿತನ, ಡಂಬಾಚಾರಗಳನ್ನು ತಿರಸ್ಕರಿಸುತ್ತಾರೆ. ವಚನಗಳು ಸನ್ಯಾಸಿ, ಜಂಗಮ, ಯೋಗಿ, ಕಾವಿಧಾರಿಗಳು, ಬ್ರಹ್ಮಚರ್ಯಾಶ್ರಮ, ಗೃಹಸ್ಥಾಶ್ರಮ, ಸನ್ಯಾಸಾಶ್ರಮ ಕಲ್ಪನೆಗಳನ್ನು ಬುಡಮೇಲು ಮಾಡುತ್ತವೆ. ಭಕ್ತ–ಭಕ್ತಿ ಕಲ್ಪನೆಯ ಬದುಕಿಗೆ, ಬದುಕೇ ಗುರು, ಅವನ ಪ್ರಾಣವೇ ದೈವ, ಅವನು ಪಡೆದ ಜ್ಞಾನವೇ ಜಂಗಮ ಎನ್ನುತ್ತಾ, ದೇಹಕ್ಕೆ–ಬದುಕಿಗೆ–ಕರ್ಮಿಗಳಿಗೆ ಆದ್ಯತೆ ನೀಡುವುದನ್ನು ಕಾಣುತ್ತೇವೆ.

ಭಕ್ತಿ ಕುರಿತು ಶರಣರ ವಚನಗಳ ವಿಶ್ಲೇಷಣೆ:

ಸೊಸ್ಸೂರ್‌ನ (Saussure) 'ದಿ ಕನ್‌ಸ್ಟ್ರಕ್ಷನ್' (Deconstruction) – ವೇಶ್ಯೆಯರಾಗಿ ಮೇಲ್ವರ್ಗದ ದೇವತೆಗಳಿಗೆ ಮೇಲ್ವರ್ಗದ ದೇವರುಗಳು ಈ ದೇವತೆಗಳನ್ನು ತಮ್ಮ ಥಿಯರಿಯಂತೆ[4] ಚರ್ಚಿತ ಅಂಶಗಳನ್ನು ನೆನಪಿಸಿಕೊಂಡು ವಿಶ್ಲೇಷಿಸುವುದಾದರೆ, ವಚನಗಳು ಲೋಕ ಕಟ್ಟಿಕೊಟ್ಟ ವಿಚಾರ, ಅರ್ಥಗಳನ್ನು ಗಮನಿಸುತ್ತಾ ಅದನ್ನು ಪ್ರಭಾವಿಸುತ್ತಾ ಮತ್ತೊಂದನ್ನು ಸೃಷ್ಟಿಸುವ ಕಡೆಗೆ ವಚನಗಳ ಕಾರ್ಯ ನಡೆಯುತ್ತದೆ. ಪ್ರಪಂಚದ ಅರ್ಥವನ್ನು ವಿಘಟಿಸಿ ಹೊಸ ಅರ್ಥವನ್ನು ಸೃಜಿಸುತ್ತದೆ.

"ಉಳ್ಳವರು ಶಿವಾಲಯ ಮಾಡುವರು,
ನಾನೇನು ಮಾಡಲಿ ಬಡವನಯ್ಯಾ,
ಎನ್ನ ಕಾಲೇ ಕಂಬ ದೇಹವೇ ದೇಗುಲ..."

ಎಂಬುದು ದೇಗುಲ ಕಲ್ಪನೆಯನ್ನೇ ಒಡೆದು ಹಾಕುತ್ತದೆ. ದೇಹ ಕಲ್ಪನೆಯಲ್ಲಿ ವಿಸ್ತೀರ್ಣಗೊಳ್ಳುವುದು ಕಾಣುತ್ತೇವೆ. ದೇಹ, ಮನಸ್ಸು, ಶೀಲದ ಪಾರಂಪರಿಕ ಅರ್ಥವನ್ನು ಒಡೆದು ಹಾಕಿ ಹೊಸ ಅರ್ಥವನ್ನು ನೀಡುತ್ತದೆ. ದೇಹವೇ ದೇವಾಲಯವಾಗಿ ಮನಸ್ಸೇ ಭಗವಂತನಾಗಿ ಬದಲಾಗುವುದು. ಈ ವಚನವೇ ಸಾಕಲ್ಲವೇ, ವಚನ ಎಂಬ ಪ್ರಕಾರ ಹೇಗೆ ಸಮಾಜದಲ್ಲಿನ ಭಕ್ತಿ, ದೇವಾಲಯ ಎಂಬ ಕಲ್ಪನೆಯನ್ನು ಒಡೆದು ಹಾಕಿ ದೇಹವೇ ದೇಗುಲವಾಗಿ ಜೀವವೇ ದೇವರಾಗುವ ಕ್ರಮ ಸೊಸ್ಸೂರ್‌ನ ಭಾಷಾವ್ಯವಸ್ಥೆಯಲ್ಲಿ ಒಡೆದು ಕಟ್ಟುವ ನೀತಿಯನ್ನು ನೆನಪಿಸುವಂತಿದೆ. ವಚನಕಾರ್ತಿಯಾದ ಸೂಳೆ ಸಂಕವ್ವೆಯ ವಚನಗಳಲ್ಲಿ ಕರ್ಮವೇ ಶೀಲ ಎನ್ನುತ್ತಾ, ದೇಹ–ಮನಸ್ಸು ಕ್ರಿಯೆಯೊಂದಿಗೆ ಸೇರಿ ಬದುಕು ಶಿವಾರ್ಪಿತ ಎನ್ನುವ ಮೂಲಕ ಹೊಸ ಅರ್ಥವನ್ನೇ ಕಟ್ಟಿಕೊಡುತ್ತದೆ. ಅವಳ ಕಾರ್ಯವೇ ವೇಶ್ಯಾತನವಾಗಿದ್ದರೂ ಅದೇ ಶಿವನ ಪೂಜೆಯಾಗುತ್ತದೆ. ನಿಷ್ಠೆಯಿಂದ ಇರುವಂಥ ವಚನಗಳು ಅಲ್ಲಿಯೇ ಭಗವಂತನ ಕಾಣುವ ತನ್ನ ಕಾಯಕಕ್ಕೆ ನೆಲೆಗಳು ಇವೆ.

"ವ್ರತನೇಮವೆಂಬುದು ವಂಚನೆಯ ಲುಬ್ಧವಾಣಿ, ಭಕ್ತಿಯೆಂಬುದು ಬಾಜಿಗಾರನಾಟ"[5] ವಚನ ಕಂಡಾಗ ಭಕ್ತಿಯೆಂಬ ಕಲ್ಪನೆ ಶರಣರಲ್ಲಿ ಪರೀಕ್ಷೆಗೆ ಒಳಪಟ್ಟದ್ದು ಕಾಣುತ್ತೇವೆ. ವಚನಕಾರ/ಕಾರ್ತಿಯರಿಗೆ ಕಾಯಕವೇ ಪೂಜೆಯಾಗಿತ್ತು. ಭಕ್ತ ಪರಂಪರೆಯ ಕ್ರಮದನುಸಾರ ಪೂಜಿಸುವ ಪದ್ಧತಿ ಇರುತ್ತೆ. ಹಣ್ಣು, ಹಾಲು, ನೈವೇದ್ಯ, ಮಂತ್ರ, ಹೋಮ, ಸಂಗೀತ, ಹಾಡುಗಾರಿಕೆ, ನಾನಾ ರೀತಿಯ ಅಲಂಕಾರಗಳು, ಯಜ್ಞಯಾಗಾದಿಗಳು ಅಂತ ಇರುತ್ತವೆ. ಆದರೆ ವಚನಕಾರರಲ್ಲಿ ಇಷ್ಟದೈವ ಅಂಗೈಯಲ್ಲಿ ಕುಳಿತರೆ ಮುಗಿಯಿತು. ಇವರಿಗೆ ಕಾಯಕವೇ ದೈವವಾಗಿರುವುದರಿಂದ ಕಾಯ, ಕಾಯಕಕ್ಕೆ ಅವಿನಾಭಾವ ಸಂಬಂಧ ಕಂಡುಬರುತ್ತದೆ. ಭಕ್ತಿಯೆಂಬುದು (ಸ್ತ್ರೀ–ಪುರುಷ ಕಲ್ಪನೆಯ) ಲಿಂಗಕ್ಕೆ ಇರುವ ಸ್ತ್ರೀಕಲ್ಪನೆ ನಿವಾರಿಸಿಕೊಳ್ಳುವ ಮಂತ್ರ. ಲಕ್ಕಮ್ಮನ ತನ್ನ ಲೋಕಕಲ್ಪನೆಯ ಭಕ್ತಿಯನ್ನು ಅಕ್ಕಮ್ಮ ಅಲ್ಲಗಳೆಯುತ್ತಾಳೆ. ವಚನಗಳಲ್ಲಿ ಭಕ್ತಿಯೆಂಬುದು ಗಂಡು–ಹೆಣ್ಣುಗಳಲ್ಲ, ಇರುವ ಆಯ್ದಕ್ಕಿ ಸ್ತ್ರೀ ಕಲ್ಪನೆ ನಿವಾರಿಸಿಕೊಳ್ಳುವ ಮಂತ್ರ ಎಂದು ಗುರುತಿಸುತ್ತಾಳೆ. ಭಗವಂತನ ಸೇವೆ ಎಂದು ಕರೆಯುವ ಪೂಜೆಯ ಭಕ್ತಿಸ್ವರೂಪವನ್ನು ಅಲ್ಲಗಳೆಯುತ್ತಾಳೆ. ಭಕ್ತಿ ಶರಣಂಗೆ ಅರ್ಪಿತ ಶರಣನೇ ದೈವ ಎನ್ನುತ್ತಾಳೆ.

ವಚನಕಾರ್ತಿಯರಲ್ಲಿ ಭಕ್ತಿಪರಿಕಲ್ಪನೆಯ ಭಿನ್ನ ಚಿಂತನೆಗಳು:

ಮೋಳಿಗೆ ಮಹಾದೇವಿ: ಭಕ್ತಿ ಕಲ್ಪನೆ ವಚನಕಾರ್ತಿಯಿಂದ ವಚನಕಾರ್ತಿಗೆ ಭಿನ್ನ. ಆದರೆ ಮೋಳಿಗೆ ಮಹಾದೇವಿಯಲ್ಲಿ ಭಕ್ತಿಯೆಂಬುದು ಭೇದಗಳಿಲ್ಲದ್ದು, ಇಷ್ಟಲಿಂಗ, ಪ್ರಾಣಲಿಂಗ ಭಿನ್ನತೆಗಳಿಲ್ಲದ್ದು. ಕುಸುಮಗಿಡದ ಸಂಬಂಧದಂತೆ ವಾಸನೆ ಕುಸುಮಕ್ಕಲ್ಲದೆ ಗಿಡಕ್ಕೆ ಉಂಟೇ, ಗಿಡದ ಭಾಗವಾದ ಕುಸುಮ ಕುಸುಮದ ಭಾಗವಾದ ವಾಸನೆ ಮುಂದುವರೆದ ರೂಪಗಳು. ಭಕ್ತಿ ಒಂದರೊಳಗೊಂದು ಕೂಡುವ ಕೂಟದ ಪರಿ ಎನ್ನುತ್ತಾಳೆ. ಸ್ಥಳ ಕಲ್ಪನೆಯುಳ್ಳ ಲಿಂಗವಂತರ ಭಕ್ತಿ, ಇಷ್ಟಲಿಂಗದ ಭಕ್ತಿಕಲ್ಪನೆಯನ್ನು ಮೋಳಿಗೆ ಮಹಾದೇವಿ ಪ್ರಶ್ನಿಸುತ್ತಲೇ ಅದನ್ನು ವಚನಕಾರ್ತಿಯರಲ್ಲೇ ಭಿನ್ನಗೊಳಿಸುತ್ತಾಳೆ. ಭಕ್ತಿಗೆ ಎರಡು ಮೈಗಳಿವೆ ಮರಕ್ಕೆ ಬೇರು–ಶಾಖೆಗಳಿದ್ದಂತೆ. ಅದೊಂದು ನಿರಂತರ ಹೋರಾಟ ಎನ್ನುತ್ತಾಳೆ. 'ಸುಮನ ಮಲ ಅಜ್ಞಾನ ಉಭಯಕೂಟ, ಸುಬುದ್ಧಿ ಅಮಲ ಸುಜ್ಞಾನಸ್ತುತಿ'[6] (ಒಡಲು) ದೇಹ–ಉಸಿರು, ಪಂಚ ಭೇದಗಳ ಕುರುಹು ಕಳೆದು, ಸಾವು ನಿಂತಂಥದ್ದು ಭಕ್ತಿ. ಐಕ್ಯಸ್ಥಳ, ಷಟ್‌ಸ್ಥಳ ಸ್ವರೂಪದ ವಾದವಿವಾದ ಗೂಳಿತನವಲ್ಲ. ಭಕ್ತಿ ಚಿಂತನೆಯಲ್ಲಿ ಬಯಲಾಗುತ್ತದೆ. ಅದು ಕೂಟದ ಸುಖದಂತೆ ಇಲ್ಲಿ ಇವಳ ಭಕ್ತಿ ಭಿನ್ನವಾಗುತ್ತದೆ. ಭಕ್ತ ಎಂಬುದು ವಿಶ್ವಾಸ, ಕಲ್ಲನ್ನು ಬೀಜ ಎಂದು ಬಗೆದು ಬಿತ್ತಿದರೆ ವೃಕ್ಷವಾಗುವುದೇ ಹಾಗೆ ಭಕ್ತಗೆ ಶ್ರದ್ಧೆ ಎಂಬುದು ಇರಬೇಕು ಎನ್ನುತ್ತಾಳೆ. ಭಕ್ತಿಯೆಂಬುದು ಸ್ವಪ್ನವಾಗಿತ್ತು, ಒಡಲ ಹೊರೆವ ದಾಸಿ ವೇಶಿಯ ಮಕ್ಕಳಿಗೆ ನಿಜಭಕ್ತಿ ಎಲ್ಲಿಯದೋ ಶರಣರ ಹತ್ತಿರ ಇತ್ತಣವರೆಂದರೆ ಭಕ್ತಿಗೆ ಹಾನಿ ಭಕ್ತರಲ್ಲಿ ಭೇದ ಎಣಿಸಿದೊಡೆ ತುಪ್ಪದಾಸೆಗೆ ಅಲುಗಿನ ಖಡ್ಗ ನೆಕ್ಕಿದರೆ ನಾಲಗೆಗೆ ಹಾನಿಯಾದ ರೀತಿ. ಒಲವು ಇಲ್ಲದವರ ಭಕ್ತಿ ಸದಾಚಾರದ ಸೂತಕ. ಸತ್ಯಕ್ಕೆ ಸಮವಿಲ್ಲ ಭಕ್ತಗೆ ಇದಿರಿಲ್ಲ. ಮುಂದುವರಿದು, ಮೋಳಿಗೆ

ಮಹಾದೇವಿಯ ವಚನವೊಂದರಲ್ಲಿ "ಚಿತ್ರದ ಬೊಂಬೆಯ ಹಾಗೆ ಎಲ್ಲಕ್ಕೂ ಆತ್ಮನಿಂದ ಚೇತನಿಸಿ ನಡೆಯುತ್ತಿಹವೆ? ಅವು ಸೂತ್ರಾಧಿಕನ ಭೇದ, ಎನ್ನ ಶಕ್ತಿ ಜಾತಿಯ ಲಕ್ಷಣ, ನಿಮ್ಮ ಭಕ್ತಿ ಸೂತ್ರದಿಂದ ಎನ್ನ ಸ್ತ್ರೀ ಜಾತಿ ನಿಮ್ಮ ಶ್ರೀ ಪಾದದಲ್ಲಿ ಅಡಗಿತ್ತು" ಎನ್ನುತ್ತಾಳೆ. ಭಕ್ತಿ ಎಂಬುದೇ ಕೈಕೂಲಿಯೇ ಎಂಬ ಕಲ್ಪನೆಯನ್ನು ಮೋಳಿಗೆ ಮಹಾದೇವಿ ಕೊಡುತ್ತಾಳೆ. "ಮಾಡಿದ ಭಕ್ತಿಗೆ ಕೈಲಾಸಕ್ಕೆ ಹೋದೆಹೆನೆಂಬುದು ಕೈಕೂಲಿ" ವಚನದಲ್ಲಿ ಲೋಕದ ಭಕ್ತಿ – ಕಲ್ಪನೆ ತಿರಸ್ಕೃತವಾಗುವಂಥದ್ದು ಕಾಣುತ್ತದೆ. ಮರ್ತ್ಯ–ಕೈಲಾಸ ಎಂಬ ಕಲ್ಪನೆ ಅರಿವಿನಲ್ಲಿನ ಲಕ್ಷ್ಯ ಅಥವಾ ನಿಶ್ಚಿತತೆ ಇಲ್ಲದಿರುವುದರ ತೋರಿಕೆ.

ಅಕ್ಕನ ವಚನಗಳಲ್ಲಿ ಭಕ್ತಿ:

"ಇಂದೆನ್ನ ಮನೆಗೆ ಒಡೆಯರು ಬಂದಡೆ
ತನುವೆಂಬ ಕಳಶದಲುದಕವ ತುಂಬಿ,
ಕಂಗಳ ಸೋನೆಯೊಡನೆ ಪಾದಾರ್ಚನೆಯ ಮಾಡುವೆ.–
ಆನಂದದೊಡನೆ ಕುಣಿ ಕುಣಿದಾಡುವೆ
ಪರವಶದೊಡನೆ ಹಾಡುವೆ, ಭಕ್ತಿಯೊಡನೆ ಎರಗುವೆ
ನಿತ್ಯದೊಡನೆ ಕೂಡಿ ಆಡುವೆ"[7]

ನಿತ್ಯದ ಬದುಕೇ ಪೂಜೆ, ವ್ರತ, ಭಕ್ತಿ. ಹೃದಯದ ಹರುಷ, ಆನಂದ, ಪರವಶ, ನಿತ್ಯದಾಟದ ಸದ್ಭಾವನೆಯೇ ಪೂಜೆ. ಕುಟುಂಬ, ಮದುವೆ ವ್ಯವಸ್ಥೆಯ ತಿರಸ್ಕಾರ ಮಾಡುತ್ತ ವಂಚನೆ, ಬಾಜಿಗಾರರಾಟ, ಭಕ್ತಿ ಎನ್ನುತ್ತಾಳೆ.

ಅಕ್ಕಮ್ಮ: 'ಗುರುವಾಗಿ ಬಂದು ತನುವ ಕೊರೆದಡೂ' ಎಂಬುದು ಅಕ್ಕನ ವಚನದಲ್ಲಿ ಹೀಗೆ ಮೂಡುತ್ತದೆ. "ಗುರುವಾಗಿ ದೇಹದಲ್ಲಿ, ಲಿಂಗವಾಗಿ ಮನದಲ್ಲಿ ಜಂಗಮವಾಗಿ ಬಂದು ದೇಹ ಮನಸ್ಸುಗಳನ್ನು ಬಯಲು ಬೆಳಕು ಮಾಡಿದ ಮೇಲೆ ದೇವರು ಎಂಬ ಕಲ್ಪನೆ ಕೇವಲ ಆಚರಣೆಯ ಭಾಗ ಮಾತ್ರ ಎನ್ನುತ್ತಾಳೆ."

"ಏರಿಯ ಕೆಳಗೆ ಬಿದ್ದ ನೀರು ಪೂರ್ವದ ತಾಟಕ್ಕೆ ಏರಬಹುದೇ? ... ದೇವಾಲಯದಲ್ಲಿ ಸತ್ತಡೆ ಪ್ರೋಕ್ಷಣೆಯಲ್ಲದೆ, ದೇವರು ಸತ್ತಲಿ ಉಂಟೇ ಸಂಪ್ರೋಕ್ಷಣ?"[8] ಎಂದು ಅಕ್ಕಮ್ಮ ಕೇಳುತ್ತಾಳೆ. ಏರಿಯಿಂದ ಒಮ್ಮೆ ಕೆಳಗೆ ಹರಿದ ನೀರು ಹೇಗೆ ಮೇಲೇರಲು ಸಾಧ್ಯವಿಲ್ಲವೋ ಹಾಗೆ ವ್ರತಾಚಾರಿಯಲ್ಲದವನನ್ನ ಕೂಡುವುದು ಸಾಧ್ಯವೇ ಎನ್ನುತ್ತಲೇ ದೇವರ ಬಗ್ಗೆ ಹೀಗೆ ಹೇಳುತ್ತಾಳೆ. ದೇಹಕ್ಕೆ ಅಂಟಿದ ಜಾಡ್ಯ ದುರ್ಗುಣ. ದೇಹದ ತಪ್ಪುಗಳು ಜೀವನವನ್ನ ಕಾಡುವಂಥದ್ದು. ದೇಹ ಸತ್ತರೆ ಸೂತಕ, ಪವಿತ್ರಮಾಡುವುದು ಎಂಬ ಕಲ್ಪನೆಗಳಿವೆ. ಆದರೆ ದೇವರು ದೇವಸ್ಥಾನದಲ್ಲೇ ಸತ್ತುಹೋಗಿರುವಾಗ ಮಂತ್ರದ ನೀರಿನಿಂದ ಆ ಜಾಗವನ್ನು ಸೂತಕದಿಂದ ಪಾರುಮಾಡಬಹುದೇ? ಅಥವಾ ದೇವರಿಗೆ ಅಂತಹ ಆಚರಣೆಗಳು ಸಾಧ್ಯವೇ ಎಂಬ ವಿಚಾರ ಇಲ್ಲಿದೆ.

ಮೋಳಿಗೆ ಮಹಾದೇವಿ:

"ಆರುದೇವರ ನಿಮ್ಮ ಎದೆಯಲ್ಲಿ ಇರಿದುಕೊಳ್ಳಿ,
ಮೂರುದೇವರ ಮೂಗಿನಲ್ಲಿ ಮುರಿದುಕೊಳ್ಳಿ,
ಗುರು ತೋರಿದ್ದು ಒಂದೇ ದೇವರು ಸಾಕು
ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನ"[9]

ಎನ್ನುತ್ತಾಳೆ. ಇಲ್ಲಿ ಗುರು ತೋರಿದ್ದು ಮಾತ್ರ ದೇವರು ಉಳಿದದ್ದು ಅಲ್ಲ ಎಂಬ ಭಾವ ಅಭಿವ್ಯಕ್ತವಾಗುತ್ತದೆ. ದೇವರನ್ನ ಎದೆ ಮೂಗುಗಳಲ್ಲಿ ಇರಿಯುವ ಮುರಿಯುವ ಕ್ರಿಯೆ. ಗುರು ತೋರಿದ್ದು ಮಾತ್ರ ದೈವ ಎಂಬ ಕಲ್ಪನೆ.

"ಗುರು ತೋರಿದ ಒಂದೇ ದೇವರು ಸಾಕು
ಬಾಲ ಸಂಗಯ್ಯ ಅಪ್ರಮಾಣ ದೇವ ಎಂಬ ಶರಣಲು
ದೇವರು ದೇವರಲ್ಲ, ಮಣ್ಣ ದೇವರು ದೇವರಲ್ಲ
ಮರದ ದೇವರು ದೇವರಲ್ಲ,
ಪಂಚ ಲೋಹದಲಿ ಮಾಡಿದ ದೇವರು ದೇವರಲ್ಲ.
ತನ್ನ ತಾನರಿದು ತಾನಾರೆಂದು ತಿಳಿದೆಡೆ ತಾನೇ ದೇವ ನೋಡಾ"[10]

ಈ ವಚನದಲ್ಲಿ ದೇವರೆಂಬುದು ಮಣ್ಣು, ಮರ, ಪಂಚಲೋಹಗಳಲ್ಲ. ತನ್ನ ತಾನರಿಯುವ ಕ್ರಿಯೆಯೇ ದೇವರು.

ಸತ್ಯಕ್ಕ ಮಾತ್ರ ತಮ್ಮ ಹಿಂದಿನ ತಲೆಮಾರಿನವರು ಗುರು ಪರಂಪರೆಯವರು ನಂಬಿ ನಡೆದ ದೈವವನ್ನು ದೇವರು ಎಂದು ಭಾವಿಸುವುದಲ್ಲದೆ ಗುರು ಪರಂಪರೆ ಎಂಬುದೇ ದೇವರ ರೂಪ ಎಂಬ ಅಂಶವನ್ನು ಹೇಳುತ್ತಾಳೆ. ಮೇಲಿನ ಅಕ್ಕಮ್ಮ, ಅಕ್ಕಮಹಾದೇವಿ, ಸತ್ಯಕ್ಕ, ಮೋಳಿಗೆ ಮಹಾದೇವಿ ಅವರುಗಳ ದೇವರ ಕುರಿತ ವಚನಗಳನ್ನು ಕಂಡಾಗ ವಚನಕಾರ್ತಿಯರಿಗೆ ದೇವರು ಎಂಬುದು ಬೆಳಕು ಬಯಲು ಎಂಬ ತತ್ವಜ್ಞಾನದ ಪರಿಭಾಷೆಯಲ್ಲಿ ಅರಿಯುವುದನ್ನು ಕಾಣುತ್ತೇವೆ. ಅದ್ವೈತ ಎಂಬ ಭಾವ ಯಾವುದಿದೆಯೋ ಅದನ್ನು ಅನುಭವಿಸಿದವರು, ಆ ಚಿಂತನೆಗಳಿಗೆ ಅನುಗುಣವಾಗಿ ಬದುಕಿದವರು ಎಂದೆನಿಸುವುದಲ್ಲದೆ ದೇವರು ಎಂಬುದು ಗುರು ಪರಂಪರೆ ನಂಬಿದ ರೂಪಗಳು, ದೇವರನ್ನು ಭೂಮಿಯ ಮೇಲಿನ ಮನುಷ್ಯ ಎಂಬಂತೆ ನೋಡುವುದಲ್ಲದೆ ಮನುಷ್ಯ ದೇವರಾಗುವ ಶಕ್ತಿ ಹೊಂದಿರುತ್ತಾನೆ. ಮನುಷ್ಯನೇ, ಶರಣನೆ ಭೂಮಿಯ ಮೇಲಿನ ದೇವರು ಎಂಬ ಭಾವ ತಂದು ಕೊಡುತ್ತಾರೆ. ಸನ್ನಿವೇಶ, ಕಾಲ, ವ್ಯಕ್ತಿಯ ನಡೆ ನುಡಿ ಗಮನದಲ್ಲಿದ್ದೇ ವ್ಯಕ್ತಿಯನ್ನು ದೇವರನ್ನಾಗಿ ನೋಡುವ ಕ್ರಮ ಇವರಲ್ಲಿ ಅಭಿವ್ಯಕ್ತವಾಗಿದೆ. ದೇವರಿಗೆ ಹಂಬಲಿಸುವುದು ತಪ್ಪಲ್ಲ ಆದರೆ ಅಂತಹ ವ್ಯಕ್ತಿ ದೊರೆತದ್ದಾದರೆ ಎಲ್ಲವನ್ನು ತ್ಯಜಿಸಿ ಹೊರಡಬೇಕೆಂದು ಅಭಿಪ್ರಾಯಪಡುತ್ತಾರೆ.

ಅಮ್ಮಗೆರಾಯಮ್ಮ:

ಅಮ್ಮುಗೆ ದೇವಯ್ಯನ ಪತ್ನಿ ರಾಯಮ್ಮನ (ನೇಕಾರ್ತಿಯಾದ) ವಚನಗಳು ಗುರು–ಲಿಂಗ–ಪತಿ ಒಂದೇ ಅಮ್ಮುಗೇಶ್ವರ ಎನ್ನುತ್ತಾಳೆ. ನನ್ನ ನಾನೇ ಅರಿತಾಗ ಬೆಳಕು, ಅರಿವೂ ನನ್ನ ಕ್ರಿಯೆಗಳಿಂದ ನಿರ್ಧರಿತವಾದದ್ದು. ನೋಡುವ ವಸ್ತುಗಳು ಮನದೊಳಗಿನ ಮುಳ್ಳುಗಳು. ದೇಹ–ಬುದ್ಧಿ–ಚಿತ್ತಗಳ ಅಹಂಕಾರ ಎಲ್ಲವನ್ನು ಎದುರಿಸಬೇಕು. ಆದ್ಯ–ವೇದ್ಯ ಎಂಬುವರ ಮಾತುಗಳಿಂದ ಅರಿತು ನಡೆಯುವೆ ಎಂಬ ಮಾತಿನಿಂದ ಸಾಧ್ಯವಿಲ್ಲದ್ದು. ಅರಿವು ಎಂಬುದು ನಮ್ಮ ನೋಟ–ಚಿಂತನೆ ಬಾಳುವ ರೀತಿ ಕಲ್ಪಿಸಿಕೊಂಡ ಸಂಬಂಧ ವ್ಯಾಪಾರ ಅರ್ಥೈಸಿಕೊಳ್ಳುವ ಮಾದರಿ ಎಲ್ಲವೂ ಮುಖ್ಯ. ಅದಿಲ್ಲದೆ ನಡೆವ ನಡೆಯಿಂದ ಏನು ನೋಡಲಾರೆವು–ಅರಿಯಲಾರೆವು. ನಮ್ಮ ಬದ್ಧತೆಯೊಂದಿಗಿನ ಶ್ರದ್ಧೆಗೆ ಸೇರಿದ್ದು. ಅದರ ಸಾಧನೆಯಲ್ಲಿ ನಮ್ಮ ಅರಿವಿನ ಹಾದಿ ಗೋಚರವೇ ಹೊರತು ಯಾವುದೋ ಸ್ಥಳ, ಭಾಷ್ಯ, ಸಿದ್ಧಿ, ಜ್ಞಾನಕ್ಕಿಂತ, ಕರ್ಮವೇ ಪ್ರಧಾನ ಅದರ ಬದ್ಧತೆಯೇ ಬದುಕು. ಸಮಾಜದ ನಿಜವಾದ ಸವಾಲು ಶಿವನಿಗೆ ಪ್ರಿಯವಾದ ಹಾದಿ ನಿಜವಾದ ಆಧ್ಯಾತ್ಮ ಮುಕ್ತಿ ಪಥ ಎಂದು ತೋರಿಸಿಕೊಟ್ಟಳು. ವಚನಕಾರ್ತಿಯರು ತೋರಿಸಿಕೊಟ್ಟರು.

''ಮೂಗಿಲ್ಲದವಂಗೆ ಕನ್ನಡಿಯ ತೋರಲೇಕೆ? ಕೈಯಿಲ್ಲದವಂಗೆ ಕುದುರೆಯನೇರಲೇಕೆ? ಇಷ್ಟಲಿಂಗವೇಕೆ ಅಮ್ಮುಗೇಶ್ವರಾ?''[11] ಕಾರ್ಯಕಾರಣದ ಸಂಬಂಧದ ಹಾಗೆ ಇಷ್ಟಲಿಂಗದ ಹಾಗು ಭಕ್ತಿಯ ಕಲ್ಪನೆ ಮೂಡಿದೆ. ಜ್ಞಾನ, ವೈರಾಗ್ಯ, ಭಕ್ತಿ ಇಲ್ಲದ ಮೇಲೆ ಇಷ್ಟಲಿಂಗವೇತಕ್ಕೆ? ಮೂಗಿಲ್ಲದವಂಗೆ ಕನ್ನಡಿ, ಕೈ ಇಲ್ಲದವಂಗೆ ಕುದುರೆ, ಕಾಲಿಲ್ಲದವಂಗೆ ಏಣಿ ಈ ಉಪಮೆಗಳು ಯೋಗ್ಯತೆ ಯಾರಿಗಿರುತ್ತವೋ ಅವರಿಗೆ ಅಪೇಕ್ಷಣೀಯ ಎನ್ನುವಂತಿದೆ.

ಕದಿರೆಮ್ಮೆ:

''ನಾ ತಿರುಹುವ ರಾಟೆಯ ಕುಲಜಾತಿಯ ಕೇಳಿರಣ್ಣಾ, ...ಇನ್ನೇವೆ ಕದಿರೆಮ್ಮಿಯೊಡೆಯ ಗುಮ್ಮೇಶ್ವರಾ?''[12] ಅರಿವು ಎಂಬುದೇ ಕದಿರು, ಭಕ್ತಿಯೆಂಬುದೇ ಕೈ ಈ ರೂಪಕದಲ್ಲಿ, ಬದುಕು ನೇಯ್ಗೆಯಾಗಿ ಕಸುಬಾಗಿ ಅದೇ ಅರಿವು ಆಗುತ್ತದೆ. ಈ ನೇಯ್ಗೆ ಜೀವನವನ್ನು ಅರಿಯುವಲ್ಲಿ ಸಹಾಯ ಮಾಡುತ್ತಿರುವುದೇ ಪ್ರೀತಿ ಅದೇ ಭಕ್ತಿ. ಅದನ್ನು ಹೆಚ್ಚುಗಾರಿಕೆ ಎಂದುಕೊಳ್ಳಲಾಗದು. ಒಡೆಯನಿಗೆ ಇಷ್ಟವಾಗದು. ಬ್ರಹ್ಮಜ್ಞಾನ ವಿದ್ಯೆ ಮಾತ್ರ ಜ್ಞಾನ ಎಂಬ ಪರಂಪರೆಯಲ್ಲಿನ ಕಲ್ಪನೆ ವಚನಕಾರ್ತಿಯರಲ್ಲಿ ಬುಡಮೇಲಾಗುತ್ತದೆ. ಲೌಕಿಕ ವಿದ್ಯೆಯೇ ಸಾಧನೆಯ ಹಾದಿಗೆ ಆಧ್ಯಾತ್ಮದ ಆತ್ಮದ ಪರಿವರ್ತನೆಗೆ ಮೊದಲ ಹೆಜ್ಜೆ ಎಂಬುದನ್ನು ದಾಖಲಿಸಿತು. ಶಾಸ್ತ್ರದ ಅಧ್ಯಯನಕ್ಕಿಂತ ಬದುಕಿನ ಉಳಿವಿಗೆ ಕಾರಣವಾಗುವ ಕರ್ಮ, ವೃತ್ತಿ ವಿದ್ಯೆ ಅದರ ಅಧಿಕೃತಗೊಳಿಸಿತು. ಸಿದ್ಧಿಯೇ ಪ್ರಧಾನ ಎಂಬುದನ್ನು ವಚನಕಾರ್ತಿಯರ ಭಕ್ತಿ ಪರಂಪರೆ, 'ಪುರಾಣವೆಂಬುವುದು ಪುಂಡರ ಗೋಷ್ಠಿ, ಓದು ಸಂತೆಯ ಮಾತು' ಎಂದಿದ್ದು ಅಲ್ಲದೆ ಭೋಗದ ಶಕ್ತಿ–ವಿರಕ್ತತೆ ಅರಿಯದೆ ನಡೆದದ್ದಾದರೆ ನಮಗೆ ನಾವೇ

ಮಾಡಿಕೊಂಡ ವಂಚನೆ ಎಂಬ ಅರಿವು ಪ್ರಮುಖವಾದದ್ದು ಎಂದು ಸಮಾಜಕ್ಕೆ ತಿಳಿಸಿತು. ವೇದ–ಶಾಸ್ತ್ರ–ಪುರಾಣ–ಆಗಮ–ಪರಭಾಷೆ–ಪರತತ್ವ ಮಾತನಾಡಿದರೇನು? ಜಿಹ್ವೇಂದ್ರಿಯಕ್ಕೆ ಹರಿಯದೆ, ಗುಹ್ಯೇಂದ್ರಿಯಕ್ಕೆ ಸಿಕ್ಕದೆ ಅರಿಯದೆ ಬಂದುದಾದರೆ ಬದುಕಿಗೆ ಮಾಡಿಕೊಳ್ಳುವ ಮೋಸವಲ್ಲದೆ ಮತ್ತೇನೂ ಅಲ್ಲ ಎಂದು ಅಮ್ಮಗೆ ರಾಯಮ್ಮ ತನ್ನ ವಚನಗಳಲ್ಲಿ ಅಭಿವ್ಯಕ್ತಿಸುತ್ತಾಳೆ.

ನಾಗಲಾಂಬಿಕೆ:

(ಬದುಕೆಂಬ ಸೆರಗು ನೀಡಿದ ತಂದೆ. ಭಕ್ತಿ – ಬಸವ ಎಂಬುದು) ಅವಳ ನಾಲ್ಕು ವಚನಗಳು ತನ್ನನ್ನು ಬಸವನಿಗೆ ಅರ್ಪಿಸಿಕೊಂಡ ಪೂರ್ಣಪ್ರಮಾಣದ ಭಕ್ತಳಂತೆ. ಅವಳಿಗೆ ತಮ್ಮನೇ ಗುರು, ದೈವ, ತಂದೆ, ಕರ್ತವ್ಯ, ಸೇವೆ, ಬದುಕು, ಅವನಿಲ್ಲದೆಯು ಅವನನ್ನು ತನ್ನೊಳಗೆ ಆವರಿಸಿಕೊಂಡು ಬಿಟ್ಟಿದ್ದಾಳೆ. ಅವಳಿಗೆ ತನ್ನ ಅಸ್ತಿತ್ವವೇ ಬಸವನಾಗಿ ಬಿಟ್ಟಿದೆ. ತನ್ನ ಅರಿವು ಹಾಗು ಇರುವು ಎರಡು. ಭಕ್ತಿ ಇಲ್ಲಿ ವ್ಯಕ್ತಿಯಾಗಿ, ಕರ್ತವ್ಯವಾಗಿ, ಬಾಳುವ ರೀತಿಯಾಗಿ, ನೋಡುವ ಸಮಾಜವಾಗಿ, ಅಂತರಂಗದ ಬೆಳಕಾಗಿ, ಹಂಚುವ ಪ್ರಸಾದವಾಗಿ ಎಲ್ಲ ಎಲ್ಲವೂ ಆಗಿದೆ. ಬದುಕಿಲ್ಲಿ ತತ್ವದ, ಆಧ್ಯಾತ್ಮದ ಭಾಷೆಯಾದಂತೆ ಕಾಣುತ್ತದೆ. ತನ್ನನ್ನು ಅರ್ಪಿಸಿಕೊಳ್ಳುವುದು ಹೆಣ್ಣಿನ ಗುಣವೆಂದಾದರೆ ಈ ಅರ್ಪಣೆ ಅವಳ ಮಾತುಗಳಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಬದುಕೆಂಬುದು ಸಾಂಗತ್ಯದ ಹಾದಿ ಎಂದು ಯೋಚಿಸುವುದಾದರೆ, ಅವನ ನೆನಪಿನ ಭಾಗವೇ ಬದುಕಾಗಿದೆ. ಬಸವನಿದ್ದು ಇಲ್ಲದೆಯು, ತಮ್ಮನ ನೆನಪೇ ಶಕ್ತಿಯಾಗಿ, ನಡೆಸುತ್ತಿರುವ ಭಕ್ತಿಯಾಗಿ, ಚೈತನ್ಯವಾಗಿ ಗೋಚರವಾಗುತ್ತದೆ. ಬಸವನೆಂಬುದೆ ಭಕ್ತಿ. ಅದೇ ಬೆಳಕು. ಮನದೊಳಗಿನ ಭಾವ, ಅಂತರಂಗದ ಮೂರ್ತಿ. ಬಸವನ ಕರ್ತವ್ಯವೆ ಪ್ರಾಣ, ಸುತ್ತಲೂ ಅವನದೇ ಕೀರುತಿ, ಅವನೇ ಗುರು, ದೈವ ಎನ್ನುತ್ತಾಳೆ. ನೀ ಇಲ್ಲದಿದ್ದರೂ ನಿನ್ನೊಳಗೆ ನಾ ಇರುವೆ. ನೀ ಅಗಲಿರಬಹುದು, ಆದರೆ ನಾ ಇನ್ನು ನಿನ್ನೊಳಗೆ ಇರುವೆ. ಭಕ್ತಿ, ಮುಕ್ತಿ, ಲಿಂಗ ಜಂಗಮ, ಗುರು, ಮುರುತಿ, ಅಂತರಂಗದ ಜ್ಯೋತಿ ಎಲ್ಲವೂ ನೀನೆ ಆಗಿದ್ದು ಅದರಲ್ಲಿ ನಾ ಇದ್ದು ಇಂದು ನೀ ಇಲ್ಲದಿದ್ದರೂ ನಾನಿನ್ನೊಳಗಿರುವೆ ಎನ್ನುತ್ತಾಳೆ.

ಗೊಗ್ಗವೆ:

"ಮಾರುತನಲ್ಲಿ ಬೆರೆತ ಗಂಧದಂತೆ,
ಸುರತದಲ್ಲಿ ಬೆರೆತ ಸುಖದಂತೆ,
ಮೆಚ್ಚಿದಲ್ಲಿ ಕೊಡುವ ಉಚಿತದಂತೆ,
ಭಕ್ತರಿಗದೆ ಹಾದಿ ಎಂದೆ ನಾಸ್ತಿನಾಥ"[13]

ಗಂಧ ಗಾಳಿ ಬೇರೆ ಮಾಡಲು ಸಾಧ್ಯವಿಲ್ಲ. ಮೆಚ್ಚಿದವರಲ್ಲಿ ಕೂಡಿದರೆ ಸುರತ ಸುಖವಿದ್ದಂತೆ. ಇಲ್ಲಿ ಐಕ್ಯ ಸ್ಥಿತಿಯೊಂದರ ವಿವರಗಳಿವೆ. ಭಕ್ತ ಹಾಗು ಭಗವಂತ ಎಂಬ ಭೇದಗಳಿಲ್ಲದ ಭಾವ. ನಿಜವಾದ ಭಕ್ತಿ ಎಂದರೆ ಭಿನ್ನತೆಗಳಿಲ್ಲದೆ ಹಾಗು

ಭೇದಗಳಿಲ್ಲದೆ ಇರುವುದು. ಅದು ಸುರತ ಸುಖದಂತೆ ಎನ್ನುತ್ತಾಳೆ. ಮೆಚ್ಚಿದ ಒಲಿದ ಗಂಡು ಹೆಣ್ಣಿನ ಸಮಾಗಮದ ಕ್ರಿಯೆಯೊಂದರ ಹಿನ್ನೆಲೆಯಲ್ಲಿ ವಿಶ್ಲೇಷಿಸುತ್ತಾಳೆ. ಸುಖದ ಕಲ್ಪನೆಯ ಭಾಗವಾಗಿ ಭಕ್ತಿಯನ್ನು ಕಟ್ಟಿಕೊಡಲು ಪ್ರಯತ್ನಿಸಿದ್ದಾಳೆ.

ಉಪಸಂಹಾರ:

ವಚನಕಾರ್ತಿಯರ ವಚನಗಳು ಅನುಭವದ ಮೂಸೆಯಲ್ಲಿ ರೂಪುಗೊಂಡವು. ಅವುಗಳಲ್ಲಿ ಅವರ ದೈವಗಳಿವೆ, ಬದುಕಿದೆ, ಆದರ್ಶವಿದೆ, ಜೀವನ ದೃಷ್ಟಿಯಿದೆ, ಸಮಾಜಕ್ಕೆ ಮಾರ್ಗದರ್ಶನವಿದೆ. ಭಕ್ತಿ ಸಂಬಂಧಿಸಿದಂತೆ ಹುಟ್ಟಿಕೊಂಡಿರುವ ವಚನಗಳಲ್ಲಿ ಕಂಡುಬರುವ ರೂಪಕಗಳು ಅದ್ಭುತವಾದ ವಿನ್ಯಾಸಗಳನ್ನು ಹೊಂದಿದ್ದು ಬೀಜದೊಳಗಿನ ವೃಕ್ಷದಂತೆ ಎಲ್ಲವೂ ಅಡಕವಾಗಿದೆ. ಆ ಸತ್ವವನ್ನು ಬಹಿರಂಗಗೊಳಿಸುವ ಪುಟ್ಟ ಪ್ರಯತ್ನವೇ ಈ ಅಧ್ಯಾಯ.

ಅಡಿ ಟಿಪ್ಪಣಿಗಳು:

1. ಮೈಸೂರು ವಿಶ್ವವಿದ್ಯಾನಿಲಯ (ಸಂ.), (1966), ಶ್ವೇತಾಶ್ವತರ ಉಪನಿಷತ್ತು, ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಅಧ್ಯಾಯ 6, ಮಂತ್ರ 23.
2. ನಾರಾಯಣಾಚಾರ್ಯ ಕೆ. ಎಸ್., (2021), ಭಗವದ್ಗೀತೆ, ಹುಬ್ಬಳ್ಳಿ: ಸಾಹಿತ್ಯ ಪ್ರಕಾಶನ, ಅಧ್ಯಾಯಗಳು: 6 (ಆತ್ಮಸಂಯಮ ಯೋಗ), 9 (ರಾಜವಿದ್ಯಾ ರಾಜಗುಹ್ಯ ಯೋಗ), 12 (ಭಕ್ತಿ ಯೋಗ).
3. ಭೂಸನೂರುಮಠ ಎಸ್. ಎಸ್., (1969), ಶೂನ್ಯಸಂಪಾದನೆಯ ಪರಾಮರ್ಶನ, ಧಾರವಾಡ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, (ಶೂನ್ಯಸಂಪಾದನೆ ವಿಮರ್ಶಾತ್ಮಕ ಅಧ್ಯಯನ).
4. ನಾರಾಯಣ ಕೆ. ವಿ., (1996), ಸೊಸ್ಸೂರ್ ಕನ್‌ಸ್ಟ್ರಕ್ಷನ್ ಥಿಯರಿ: ತೊಂಡು ಮೇವು, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, (ಸಂರಚನಾವಾದ ಮತ್ತು ಭಾಷಾವಿಜ್ಞಾನ ಪ್ರಬಂಧ).
5. ಕಲಬುರ್ಗಿ ಎಂ. ಎಂ. (ಪ್ರ.ಸಂ.), (1993), ಸಮಗ್ರ ವಚನ ಸಂಪುಟ – 5, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ವಚನ ಸಂಖ್ಯೆ: 336.
6. ಕಲಬುರ್ಗಿ ಎಂ. ಎಂ. (ಪ್ರ.ಸಂ.), (1993), ಸಮಗ್ರ ವಚನ ಸಂಪುಟ – 5 (ಮೋಳಿಗೆ ಮಹಾದೇವಿ), ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ವಚನ ಸಂಖ್ಯೆ: 1199.
7. ಕಲಬುರ್ಗಿ ಎಂ. ಎಂ. (ಪ್ರ.ಸಂ.), (1993), ಸಮಗ್ರ ವಚನ ಸಂಪುಟ – 5, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ವಚನ ಸಂಖ್ಯೆ: 74.
8. ಕಲಬುರ್ಗಿ ಎಂ. ಎಂ. (ಪ್ರ.ಸಂ.), (1993), ಸಮಗ್ರ ವಚನ ಸಂಪುಟ – 5, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ವಚನ ಸಂಖ್ಯೆ: 460.

9. ಕಲಬುರ್ಗಿ ಎಂ. ಎಂ. (ಪ್ರ.ಸಂ.), (1993), ಸಮಗ್ರ ವಚನ ಸಂಪುಟ – 5, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ವಚನ ಸಂಖ್ಯೆ: 686.
10. ಕಲಬುರ್ಗಿ ಎಂ. ಎಂ. (ಪ್ರ.ಸಂ.), (1993), ಸಮಗ್ರ ವಚನ ಸಂಪುಟ – 5, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ವಚನ ಸಂಖ್ಯೆ: 1140.
11. ಕಲಬುರ್ಗಿ ಎಂ. ಎಂ. (ಪ್ರ.ಸಂ.), (1993), ಸಮಗ್ರ ವಚನ ಸಂಪುಟ – 5, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ವಚನ ಸಂಖ್ಯೆ: 682.
12. ಕಲಬುರ್ಗಿ ಎಂ. ಎಂ. (ಪ್ರ.ಸಂ.), (1993), ಸಮಗ್ರ ವಚನ ಸಂಪುಟ – 5, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ವಚನ ಸಂಖ್ಯೆ: 17.
13. ಕಲಬುರ್ಗಿ ಎಂ. ಎಂ. (ಪ್ರ.ಸಂ.), (1993), ಸಮಗ್ರ ವಚನ ಸಂಪುಟ – 5, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ವಚನ ಸಂಖ್ಯೆ: 695.

ಪರಾಮರ್ಶನ ಗ್ರಂಥಗಳು:

1. ಕಲಬುರ್ಗಿ ಎಂ. ಎಂ. (ಪ್ರ.ಸಂ.), (1993), ಸಮಗ್ರ ವಚನ ಸಂಪುಟ, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ.
2. ಮೈಸೂರು ವಿಶ್ವವಿದ್ಯಾನಿಲಯ (ಸಂ.), (1966), ಶ್ವೇತಾಶ್ವತರ ಉಪನಿಷತ್ತು, ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
3. ನಾರಾಯಣಾಚಾರ್ಯ ಕೆ. ಎಸ್., (2021), ಭಗವದ್ಗೀತೆ, ಹುಬ್ಬಳ್ಳಿ: ಸಾಹಿತ್ಯ ಪ್ರಕಾಶನ.
4. ಭೂಸನೂರುಮಠ ಎಸ್. ಎಸ್., (1969), ಶೂನ್ಯಸಂಪಾದನೆಯ ಪರಾಮರ್ಶನ, ಧಾರವಾಡ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
5. ನಾರಾಯಣ ಕೆ. ವಿ., (1996), ಸೊಸ್ಸೂರ್ ಕನ್‌ಸ್ಟ್ರಕ್ಷನ್ ಥಿಯರಿ: ತೊಂಡು ಮೇವು, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.